**<u>IN THE COURT OF THE SENIOR CIVIL JUDGE AND JMFC, TIPTUR.</u>**

**CC No. 3432/2021**

**PW-1**

**<u>Oath is administered to the witness on 27.10.2025</u>**

**<u>Cross examination by: Sri. PR Counsel for accused</u>**

ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಸಹಿಯು ನನ್ನದೇ ಆಗಿದೆ. ನಾನು ಚಿಲ್ಲರೆ ಅಂಗಡಿ ವ್ಯಾಪಾರ ಹೊಂದಿದ್ದೇನೆ. ಆ ವ್ಯವಹಾರ ಸುಮಾರು 25 ವರ್ಷಗಳಿಂದ ಮಾಡುತ್ತಿದ್ದೇನೆ. ನನಗೆ ಈ ಪ್ರಕರಣ ದಾಖಲು ಮಾಡುವ ಸಮಯದಲ್ಲಿ ಜಮೀನು ಇತ್ತು ಈಗ ಇರುವುದಿಲ್ಲ. 1 ವರೆ ಎಕರೆ ಜಮೀನು ಇತ್ತು. ಅದು ಮಳೆ ಆಧಾರಿತ ಬೆಳೆ ಬೆಳೆಯುವಂತಹ ಹೊಲ ಆಗಿತ್ತು. 20 ವರ್ಷಗಳ ಹಿಂದೆಯೇ ಮಾರಾಟ ಮಾಡಲಾಗಿತ್ತು. ನನಗೆ ನನ್ನ ಚಿಲ್ಲರೆ ಅಂಗಡಿಯಿಂದ ತಿಂಗಳಿಗೆ 3 ಸಾವಿರ ರೂ. ಆದಾಯ ಇದೆ. ಆ ಆದಾಯದ ಮೇಲೆ ನಾನು ನನ್ನ ಜೀವನ ನಡೆಸಿಕೊಂಡು ಬರುತ್ತಿದ್ದೇನೆ. ನನಗೆ ಇದಲ್ಲದೆ ಬೇರೆ ಆದಾಯದ ಮೂಲ ಇತ್ತು ಅದು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೆ. ರಿಯಲ್ ಎಸ್ಟೇಟ್ ಎಂದರೆ ವರ್ಷಕ್ಕೆ ಒಮ್ಮೆ ಅಥವಾ ಎರಡು ವ್ಯವಹಾರ ಆಗುತ್ತಿತ್ತು ಅದರಲ್ಲಿ ಕಮೀಷನ್ ಮುಖಾಂತರ ಹಣ ಸಿಗುತ್ತಿತ್ತು ಅದು ಒಂದು ವ್ಯವಹಾರಕ್ಕೆ ಸುಮಾರು 50 ರಿಂದ 75 ಸಾವಿರ ಸಿಗುತ್ತಿತ್ತು. ನಾನು ಸುಮಾರು 10 ವರ್ಷದ ಹಿಂದೆಯೇ ರಿಯಲ್ ಎಸ್ಟೇಟ್ ವ್ಯವಹಾರವನ್ನು ನಿಲ್ಲಿಸಿರುತ್ತೇನೆ.

ಆರೋಪಿಯು ಚಿನ್ನ ಬೆಳ್ಳಿ ಅಂಗಡಿಯನ್ನು ತಿಪಟೂರಿನಲ್ಲಿ ಇಟ್ಟಿದ್ದರು ಹಾಗಾಗಿ ನನಗೆ ಪರಿಚಯ. ನಾನು ಆತನ ಬಳಿ ಚಿನ್ನ ಬೆಳ್ಳಿ ಒಡವೆಗಳನ್ನು ಮಾಡಿಸುತ್ತಿದ್ದೆ. 2020 ರಲ್ಲಿ ಕರೋನಾ ಸೋಂಕು ಬಂದಿತ್ತು ಎಂದರೆ ನಿಜ. ಅದು 2021 ರ ಜುಲೈವರೆವಿಗೂ ಇತ್ತು ಎಂದರೆ ನಿಜ. ಅದು 2020 ರ ಮಾರ್ಚ್ ನಲ್ಲಿ

ಪ್ರಾರಂಭವಾಗಿತ್ತು ಎಂದರೆ ನಿಜ. ಆ ಸಮಯದಲ್ಲಿ ಸರ್ಕಾರಿ ಮನೆಯಿಂದ ಹೊರಗೆ ಜನ ಬರಬಾರದೆಂದು ಕಟ್ಟು ನಿಟ್ಟಿನ ಆದೇಶ ಮಾಡಿತ್ತು ಎಂದರೆ ನಿಜ. 2020 ರಲ್ಲಿ ಆರೋಪಿಯು ತಿಪಟೂರಿನಲ್ಲಿಯೇ ಇದ್ದರು. ಅವರು ತಿಪಟೂರಿನ ದೊಡ್ಡಪೇಟೆಯಲ್ಲಿ ವಾಸ ಇದ್ದರು. ನಾನು ನಿಪಿ-3 ರಲ್ಲಿ ಆರೋಪಿಯ ವಿಳಾಸ ಬೆಂಗಳೂರು ಎಂದು ತೋರಿಸಿದ್ದೇನೆ ಎಂದರೆ ನಿಜ. ಬೆಂಗಳೂರಿನ ಯಾವ ಏರಿಯಾ ಎಂದು ನನಗೆ ನಿಖರವಾಗಿ ಈಗ ಹೇಳಲು ಆಗುವುದಿಲ್ಲ. ಆರೋಪಿಯು 8 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ನಿಜ. 2014 ರಿಂದ ಆರೋಪಿಯು ಬೆಂಗಳೂರಿನಲ್ಲಿ ವಾಸಾ ಇದ್ದಾರೆ ಮತ್ತು ದೊಡ್ಡಪೇಟೆಯಲ್ಲಿ ವಾಸ ಇರಲಿಲ್ಲ ಎಂದರೆ ಸಾಕ್ಷಿಯು ದೊಡ್ಡಪೇಟೆಯು ಅವರು ಹಳೆಯ ವಿಳಾಸ ಆಗಿದೆ ಎಂದು ಹೇಳುತ್ತಾರೆ. ಆರೋಪಿಗೆ ಸೇರಿದ ಮನೆ ಅಥವಾ ಅಂಗಡಿ ದೊಡ್ಡಪೇಟೆಯಲ್ಲಿ ಈಗ ಇರುವುದಿಲ್ಲ. ನನ್ನ ಪ್ರಕಾರ ಆರೋಪಿಯು ತಿಪಟೂರಿನ ದೊಡ್ಡಪೇಟೆಯ ವಿಳಾಸವನ್ನು ಸುಮಾರು 15-20 ವರ್ಷಗಳ ಹಿಂದೆ ಖಾಲಿ ಮಾಡಿರುತ್ತಾರೆ.

ದಿಃ 10-10-2020 ರಂದು ನಾನು ಆರೋಪಿಗೆ 6 ಲಕ್ಷ ರೂ. ಹಣ ಕೊಟ್ಟಿದ್ದೇನೆ ಎಂದು ಹೇಳಿದ್ದು ಆ ರೀತಿ 6 ಲಕ್ಷ ಆ ದಿನಾಂಕದಂದು ಇತ್ತು ಎಂದು ತೋರಿಸಲು ದಾಖಲೆ ಇರುವುದಿಲ್ಲ. ನಾನು ಆ ದಿನಾಂಕದಂದು ಆರೋಪಿಯು ನನ್ನಿಂದ 6 ಲಕ್ಷ ರೂ. ನಗದಾಗಿ ಹಣ ಪಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕರೋನಾ ಇದ್ದ ಕಾರಣ ಯಾವುದೇ ಬ್ಯಾಂಕಿನ ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆನ್ ಲೈನ್ ಮೂಲಕ ಮಾತ್ರ ವ್ಯವಹಾರ ನಡೆಯುತ್ತಿತ್ತು ಮತ್ತು ನಗದು ವ್ಯವಹಾರ ನಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು 6 ಲಕ್ಷ ಹಣವನ್ನು ಆರೋಪಿಯ ಮನೆಗೆ ಹೋಗಿ ಅವರ ಮಕ್ಕಳ ಸಮಕ್ಷಮ ಕೊಟ್ಟಿದ್ದೆ. ಈ ವಿಷಯವನ್ನು ನಾನು ನನ್ನ ದೂರಿನಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರಲಿಲ್ಲ. ಆರೋಪಿಯು ಬಹಳ ಹಿಂದೆಯೇ ಮನೆ ಖಾಲಿ ಮಾಡಿರುವ ಕಾರಣ ನಾನು ಆತನ ಮನೆ ಬಳಿ ಹೋಗಿ ಆತನಿಗೆ ಯಾವುದೇ ಹಣ ಕೊಟ್ಟಿಲ್ಲ ಮತ್ತು ಆ ರೀತಿ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬೆಂಗಳೂರಿನಿಂದತಿಪಟೂರಿಗೆ ಬರಲು ಯಾವುದೇ

ಸರ್ಕಾರಿ ಸಾರಿಗೆ ವ್ಯವಸ್ಥೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಜೊತೆ 14-15 ವರ್ಷಗಳ ಹಿಂದೆ ವ್ಯವಹಾರ ಮಾಡಿಕೊಂಡಿದ್ದು ಆ ಸಮಯದಲ್ಲಿ ಪಡೆದುಕೊಂಡಿದ್ದ ಚೆಕ್ ಗಳ ಪೈಕಿ ಒಂದು ಚೆಕ್ ನ್ನು ದುರುಪಯೋಗ ಮಾಡಿಕೊಂಡು ಈ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಚೆಕ್ ಬ್ಯಾಂಕಿನವರು ಹಿಂದಿರುಗಿಸಿರುತ್ತಾರೆ. ಚೆಕ್ ನ್ನು ಆರೋಪಿಯೇ ಬರೆದುಕೊಟ್ಟಿದ್ದರು. ಚೆಕ್ ನ್ನು ಆರೋಪಿಯು ಹಣ ಪಡೆದುಕೊಳ್ಳುವ ಸಮಯದಲ್ಲಿ ಕೊಟ್ಟಿದ್ದರು. ಈ ವಿಷಯವನ್ನು ನಾನು ನನ್ನ ನೋಟೀಸು, ದೂರು ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ.

ನಿಪಿ-1 ಚೆಕ್ ನ್ನು ನೋಡುತ್ತಿದ್ದು ಹೆಸರು, ದಿನಾಂಕ ಮತ್ತು ಮೊತ್ತವನ್ನು ನಮೂದಿಸಿರುವ ಕೈಬರಹ ಒಂದೇ ಆಗಿದೆ ಎಂದರೆ ಸಾಕ್ಷಿಯು ಆರೋಪಿಯೇ ಅದನ್ನು ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆ ಬರಹಗಳನ್ನು ಆರೋಪಿ ಬರೆದುಕೊಟ್ಟಿಲ್ಲ ಮತ್ತು ನಾನು ಬೇರೆ ಒಬ್ಬರಿಂದ ಬರೆಸಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಚೆಕ್ ನ ಸಂಖ್ಯೆ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಾನು ಆರೋಪಿಯ ವಿರುದ್ದ ಒಟ್ಟು 3 ಪ್ರಕರಣಗಳು ದಾಖಲು ಮಾಡಿದ್ದೇನೆ. ಎಲ್ಲಾ ಪ್ರಕರಣಗಳು ತಲಾ 6 ಲಕ್ಷಕ್ಕೆ ಹಾಕಿದ್ದೇನೆ. ನನಗೆ 6 ಲಕ್ಷ ಹಣ ಕೊಡುವಂತಹ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆ ರೀತಿ ಸಾಮರ್ಥ್ಯ ಇತ್ತು ಎಂದು ತೋರಿಸಲು ಬ್ಯಾಂಕ್ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಆರೋಪಿ ಮತ್ತು ನನ್ನ ನಡುವೆ 2014 ರಲ್ಲಿ ನಡೆದಂತಹ ವ್ಯವಹಾರಗಳಿಗೆ ಸಂಬಂಧಿಸಿದಂತೆ ನಾನು ಆತನ ಬಳಿಯಿಂದ 3 ಚೆಕ್ ಗಳನ್ನು ಪಡೆದುಕೊಂಡು ಆತನ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ 3 ಚೆಕ್ ಗಳು ಬಿಟ್ಟರೆ ನನ್ನ ಬಳಿ ಬೇರೆ ಯಾವುದೇ ಚೆಕ್ ಗಳು ಇರುವುದಿಲ್ಲ.

**Re-Examination NIL**

**(R.O.A & I.C.)**

**(Mohamed Arifulla C.F)**
SENIOR CIVIL JUDGE JMFC,
TIPTUR